

ಹಂಪಿಯ ಈ ಕಲ್ಲಿನ ರಥ ಚಲನಶೀಲತೆ ಕಳೆದುಕೊಂಡಿರುವ ಪ್ರವಾಸೋದ್ಯಮದ ರೂಪಕದಂತಿದೆ.

**‘ಒಂದು ರಾಜ್ಯ, ಹಲವು ಜಗತ್ತು’ ಎಂಬುದು ಕರ್ನಾಟಕ ಪ್ರವಾಸೋದ್ಯಮ ಇಲಾಖೆಯ ಘೋಷವಾಕ್ಯ. ಕೋವಿಡ್ ಬಿಕ್ಕಟ್ಟು ಪ್ರಾರಂಭವಾದಾಗಿನಿಂದ ಪರಿಸ್ಥಿತಿ ಬದಲಾಗಿದೆ. ಒಂದೊಂದು ಜಿಲ್ಲೆಯಲ್ಲಿ ಒಂದೊಂದು ಆದೇಶ, ಸುತ್ತೋಲೆ. ಏಕಸೂತ್ರ ಇಲ್ಲದ ಕಾರಣದಿಂದಾಗಿ ಪ್ರವಾಸಿಗರು ಗೊಂದಲಕ್ಕೊಳಗಾಗಿ, ಪ್ರವಾಸೋದ್ಯಮ ಕ್ಷೇತ್ರ ಹೈರಾಣಾಗಿದೆ. ಮಳೆಯ ದಿನಗಳಲ್ಲಿ ಪ್ರವಾಸಿಗರು ಊರು ನೋಡಲಿಕ್ಕೆ ಮನೆಯಿಂದ ಹೊರಗೆ ಬರಬೇಕಿತ್ತು. ಆದರೆ, ಕೋವಿಡ್ ಮಾರ್ಗಸೂಚಿಯಲ್ಲಿನ ವಿರೋಧಾಭಾಸಗಳು ಜನರ ಪ್ರವಾಸದ ಉತ್ಸಾಹಕ್ಕೆ ಕಡಿವಾಣ ಹಾಕಿವೆ. ಹಲವು ನಿರ್ಬಂಧಗಳು, ನಾಲ್ಕೈದು ಪಟ್ಟು ಹೆಚ್ಚು ದುಡ್ಡು ವಸೂಲಿ, ಜನರಲ್ಲಿ ಹಣದ ಹರಿವು ಕಡಿಮೆಯಾಗಿರುವುದು, ಹೀಗೆ ಹಲವು ಸಮಸ್ಯೆಗಳಿಂದಾಗಿ ಪ್ರವಾಸಿ ಸ್ಥಳಗಳು ಕಳೆಗುಂದಿವೆ. ಪ್ರವಾಸೋದ್ಯಮವನ್ನೇ ನಂಬಿಕೊಂಡ ಹೋಟೆಲ್ ಉದ್ಯಮ, ವಾಹನ ಉದ್ಯಮ ದಿಕ್ಕೆಟ್ಟಿದ್ದರೆ, ಸ್ಥಳೀಯರು ಹಾಗೂ ಗೈಡ್‌ಗಳು ಕಂಗಾಲಾಗಿದ್ದಾರೆ. ಕರ್ನಾಟಕದ ಮಟ್ಟಿಗೆ ಪ್ರವಾಸೋದ್ಯಮ ‘ಪ್ರಯಾಸೋದ್ಯಮ’ ಆಗಿರುವ ಸಂದರ್ಭದ ವಿಶ್ಲೇಷಣೆ ಈ ವಾರದ ‘ಸುಧಾ’ ವಿಶೇಷ.**

